## ವಾರ್ತಾ ವಿಶ್ಲೇಷಣೆ

**ದಿವ್ಯತೆಯ ಅನುಪಮ ಪ್ರದರ್ಶನ:** "ಮಂತ್ರಮುಗ್ಧಗೊಳಿಸುವ ಮೋಹಕತೆಗೆ ಹಲವು ಮುಖಗಳಿವೆ. ಆದರೆ, ೧೫೦೦ ವರ್ಷಗಳ ಹಿಂದಿನ, ಭಾರತದ ಈ ಗವಿಯ ಗೋಡೆಯ ಮೇಲಿನ ಈ ಚಿತ್ರದಲ್ಲಿರು ವಷ್ಟು ಬೇರೆಲ್ಲೂ ಇರುವುದು ವಿರಳ" ಎಂದು ಅಜಂತಾ ಚೈತ್ಯಾಲಯ ಗಳಲ್ಲಿರುವ **ಪದ್ಮಪಾಣಿ** ಎಂಬ ಚಿತ್ರದ ಬಗ್ಗೆ ಲೇಖಕ ಟಾಮ್ ಓ ನ್ಯೆಲ್ ಹೇಳುತ್ತಾರೆ. ಮುಂದುವರಿದು ಅವರು ಹೀಗೆ ಬರೆಯುತ್ತಾರೆ: "ಇದೊಂದು ಮನುಷ್ಯನ ಚಿತ್ರ. ಅವನೊಂದು ಉದ್ದ ಕಿರೀಟವನ್ನು ಧರಿಸಿದ್ದಾನೆ. ಒಂದು ಮೃದುವಾದ ಕಮಲ ಪುಷ್ಪವನ್ನು ಕೈಯಲ್ಲಿ ಹಿಡಿದಿದ್ದಾನೆ. ಅವನ ಮುಖವು ಪರಮಶಾಂತಿಯೇ ಮೈವೆತ್ತಿದಂತಿದೆ. ಅರ್ಧ ನಿಮೀಲಿತ ನೇತ್ರಗಳು. ಮದುವಾದ ನಗುವೊಂದು ತುಟಿಗಳ ಮೂಲಕ ಹೊರ ಹೊಮ್ಮುತ್ತಿದೆ. ಆತನ ಇಡೀ ವ್ಯಕ್ತಿತ್ವವೇ ಅತ್ಯಂತ ಮಧುರ ಸ್ವಪ್ನದಲ್ಲಿ ತನ್ಮಯತೆಯನ್ನು ಪಡೆದಿದೆ." ಇದನ್ನು ನೋಡುವಾಗ ಪಕ್ಕದಲ್ಲಿದ್ದ ಛಾಯಾಗ್ರಾಹಕ ಬಿನೋಯ್ ಬೆಹಲ್, ಅವರ ಕಿವಿಯಲ್ಲಿ ಉಸುರಿದರಂತೆ, "ಈ ಚಿತ್ರ ಒಂದು ಕನ್ನಡಿಯ ಹಾಗೆ. ಅದು ನಮ್ಮಲ್ಲಿರುವ ದಿವ್ಯತೆಯನ್ನು ಪ್ರತಿಫಲಿಸಿ ತೋರಿಸುತ್ತಿದೆ."

ಅಜಂತಾ ಗುಹೆಗಳಲ್ಲಿರುವ ಇನ್ನಿತರ ಚಿತ್ರಗಳ ಬಗ್ಗೆಯೂ ಟಾಮ್ ಓ ನ್ಯೆಲ್ ಅವರ ಅಭಿಪ್ರಾಯ ಇದೇ ರೂಪದ್ದಾಗಿದೆ. ಅವರು ಬರೆಯುತ್ತಾರೆ: "ಗುಹೆಯನ್ನು ಪ್ರವೇಶಿಸಿದ ಒಡನೆ, ನೀವು ಇನ್ನೊಂದು ಪ್ರಪಂಚಕ್ಕೆ ಪ್ರವೇಶಿಸುತ್ತೀರಿ. ಇಲ್ಲಿರುವ ಮೂವತ್ತು ಗುಹೆಗಳು ಪರಮ ನಿರ್ವಾಣದ ಅನುಭವವನ್ನು ತಂದುಕೊಡಲೆಂದು ವಿನ್ಯಾಸ ಮಾಡಲ್ಪಟ್ಟಿವೆ. ನೂರಾರು ವರ್ಷಗಳ ಹಿಂದೆ ರಚಿಸಿದ ಚಿತ್ರಗಳ ಭಾಗಗಳಷ್ಟೇ ಈಗ ಉಳಿದಿವೆ. ಆದರೆ ಇಂದೂ ಅವು ಸ್ಫುರಿಸುವ ಆಧ್ಯಾತ್ಮಿಕ ಭಾವವನ್ನು ಅನುಭವಿಸಬಹುದು. ಕತ್ತಲಿನ ಗರ್ಭದಲ್ಲಿ ಹೊಮ್ಮುವ ಈ ಚಿತ್ರಗಳ ಕಾಂತಿ ಎಂದೆಂದಿಗೂ ಬಸವಳಿಯದ ಸ್ವರ್ಗದ ದರ್ಶನವನ್ನು ನಮಗೀಯುತ್ತದೆ. **ಒಟ್ಟಿನಲ್ಲಿ ಭಾರತದ ಕಲೆಯು ಆತ್ಮದರ್ಶನದ ಕನ್ನಡಿಯೂ ಹೌದು, ಕಿಟಕಿಯೂ ಹೌದು. ಅದು ಉನ್ನತ ಚೈತನ್ಯದ ಹಲವು ದರ್ಶನಗಳನ್ನು ನಮಗೆ ಮಾಡಿಸಿ ಕೊಡುತ್ತದೆ. ಇದನ್ನು ನಿಜಾರ್ಥದಲ್ಲಿ ಕಂಡವರು ಋಷಿಗಳಾಗುತ್ತಾರೆ, ಬೋಧಿಸತ್ವನಂತೆ ಮುಗುಳ್ನಗುವ ಗುರುಸಮಾನರಾಗುತ್ತಾರೆ."**

(ನ್ಯಾಷನಲ್ ಜಿಯಾಗ್ರಾಫಿಕ್, ಜನವರಿ ೨೦೦೮)

**ತಾಂತ್ರಿಕತೆ ಮತ್ತು ಬೌದ್ಧಿಕತೆ – ಒಂದು ವಿರೋಧಾಭಾಸ:** ತಾಂತ್ರಿಕತೆಯ ಪ್ರಗತಿ ಒಂದು ಸಮಾಜವು ಗಳಿಸಿರುವ ನಾಗರಿಕತೆಯ ಹಂತವನ್ನು ಪ್ರತಿಬಿಂಬಿಸುವುದೇ? ಅದು ಹಲವು ಕ್ಷೇತ್ರಗಳಲ್ಲಿ ಕ್ರಾಂತಿಯನ್ನುಂಟು ಮಾಡಿರುವುದನ್ನು ಯಾರೂ ಅಲ್ಲಗಳೆಯಲಾರರು. ಆದರೆ, ಭೌತಿಕವಾಗಿ ಮತ್ತು ಬೌದ್ಧಿಕವಾಗಿ, ಉನ್ನತ ನಾಗರಿಕತೆಗೆ ಏರುವ ಸಾಮಾನ್ಯ ಪ್ರಕ್ರಿಯೆ ವಿವಿಧ ಸಮಾಜಗಳಲ್ಲಿ ಇತ್ತೀಚೆಗೆ ಕುಂಠಿತವಾಗುತ್ತಿರುವುದು ಕಂಡು ಬರುತ್ತದೆ ಎಂದು ಬರೆಯುತ್ತಾರೆ, ಶ್ರೀ ಶಂತನು ಸಿನ್ಹಾ.

ಯಶಸ್ಸನ್ನು ಸಾಧಿಸಲು ಜನರು ತಮ್ಮ ತಮ್ಮ ನಡುವೆ ಮಾಡಿಕೊಂಡ ಒಡಂಬಡಿಕೆಯೇ ತಾಂತ್ರಿಕತೆಯ ರೂಪದಲ್ಲಿ, ಕಟ್ಟಡನಿರ್ಮಾಣ, ವಿವಿಧ ಸಾರಿಗೆ ಸಾಧನಗಳು ಮತ್ತು ಯುದ್ಧ ಶಸ್ತ್ರಾಸ್ತ್ರಗಳಾಗಿ ಮೂರ್ತ ರೂಪವನ್ನು ಪಡೆದುಕೊಳ್ಳುತ್ತದೆ. ಆದರೆ ಇಲ್ಲೊಂದು ಗಂಭೀರ ಸಮಸ್ಯೆ ಇದೆ. ಜನರ ಬೌದ್ಧಿಕ ಔನ್ನತ್ಯ ಮತ್ತು ತಾಂತ್ರಿಕತೆಯ ಗುಣಮಟ್ಟಗಳ ನಡುವೆ ವೈಪರೀತ್ಯವನ್ನು ನಾವು ಕಾಣುತ್ತೇವೆ. ತಾಂತ್ರಿಕತೆಯು, ಬೌದ್ಧಿಕ ಮಟ್ಟದಲ್ಲಿ ಕೆಳ ಹಂತಗಳಲ್ಲಿರುವ, ಕೇವಲ ಭೋಗಾಸಕ್ತರ ಮತ್ತು ವಿರಾಮಜೀವನವನ್ನು ಇಚ್ಛಿಸುವ ವ್ಯಕ್ತಿಗಳ ಕೈಯಲ್ಲಿ ಸಿಕ್ಕಿದಾಗ ಸಮಸ್ಯೆಯು ಇನ್ನೂ ತೊಡಕಾಗುತ್ತದೆ. ಏಕೆಂದರೆ, ತಾಂತ್ರಿಕತೆಯ ಸದುಪಯೋಗವನ್ನು ಪಡೆಯಲು ಬೇಕಾದ ಸಮಗ್ರ ಚಿಂತನಾಶಕ್ತಿ ಮತ್ತು ಊಹಾಶಕ್ತಿಗಳು ಅವರಲ್ಲಿ ಇರುವುದಿಲ್ಲ.

ಇದರಿಂದಾಗಿ ತಾಂತ್ರಿಕತೆಯ ಬೆಳವಣಿಗೆಯನ್ನು ಆಧರಿಸಿದ ಜೀವನ ಶೈಲಿ ಅಧಃಪತನದ ದಾರಿಯನ್ನು ತುಳಿಯುತ್ತದೆ. ಇತ್ತೀಚಿನ ನಮ್ಮ ದೇಶದ ವಿದ್ಯಮಾನಗಳು ಈ ಬಗೆಯ ಮಿಥ್ಯಾ ಪ್ರಜ್ಞೆಯ ದ್ಯೋತಕಗಳಾಗಿವೆ. ಭಾರತದ ಕೆಲವರ್ಗಗಳ ಜನರಲ್ಲಿ ಕಾಣಬರುತ್ತಿರುವ ಅಭೂತಪೂರ್ವ ಭೌತಿಕ ಪ್ರಗತಿಯನ್ನೇ ಅಭಿವೃದ್ಧಿಯೆಂದು ಪರಿಗಣಿಸಲಾಗದು. ಭಾರತವು ತನ್ನದೇ ಆದ ಸ್ವಂತ ಆಕರಗಳಿಂದ ಜನರ ಬೌದ್ಧಿಕ, ಭಾವನಾತ್ಮಕ ಮತ್ತು ಭೌತಿಕ – ಈ ಎಲ್ಲ ಆಯಾಮಗಳನ್ನು ಒಳಗೊಂಡ ಅಭಿವೃದ್ಧಿ ಸಾಧಿಸುವುದೇ ಶ್ರೇಯಸ್ಕರವಾದುದು. **ಇದರೊಡನೆ ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯೂ ಅತಿಮುಖ್ಯ ಎಂದು ಬೇರೆ ಹೇಳಬೇಕೇನು?** (*ದಿ ಹಿಂದೂ*, ಫೆಬ್ರವರಿ ૩, ೨೦೦೮)

**ಕೋರ್ಟಿನ ಬುಲಾವು:** ಬಿಹಾರದ ಧನಬಾದ್‌ನಲ್ಲಿದ್ದ ರಾಮನ ದೇವಸ್ಥಾನದ ಜಾಗ ತನ್ನದೆಂದು ಒಬ್ಬ ಮಹಿಳೆ ಕೋರ್ಟಿನಲ್ಲಿ ವ್ಯಾಜ್ಯ ಹಾಕಿದಳು. ಭೂಮಿ ದೇವರುಗಳ ಹೆಸರಿನಲ್ಲಿ ಇದೆಯೆಂದು ನ್ಯಾಯಾಲಯ ಅವರಿಗೇ ನೋಟೀಸು ಕೊಟ್ಟಿತು. ರಿಜಿಸ್ಟರ್ ಅಂಚೆಯಲ್ಲಿ ರಾಮ–ಹನುಮಂತರಿಗೆ ನೋಟೀಸು ಹೋದದ್ದು ವಾಪಸು ಬಂದಿತಂತೆ! **ದೇವರುಗಳನ್ನೇ ಕೋರ್ಟಿಗೆ ಎಳೆದ ನಮ್ಮ ಸಂಸ್ಕೃತಿಯ ಮಟ್ಟ ನೋಡಿ!!**

(*ಸಂಭಾಷಣ ಸಂದೇಶ*, ಫೆಬ್ರವರಿ ೨೦೦೮)


***Statement about ownership and other particulars about Viveka Prabha (according to Form IV Rule 8, circulated by Registrar of Newspapers for India).***

| | | |
|---|---|---|
| 1 | Place of Publication | Mysore 570 020 |
| 2 | Periodicity of Publication | Monthly |
| 3 | Printer's Name | J B Pattabhi |
| | Nationality | Indian |
| | Address | Pattabi Enterprises Ramavilasa Road Mysore |
| 4 | Publisher's Name | Swami Nityasthananda |
| | Nationality | Indian |
| | Address | President, Sri Ramakrishna Ashrama, Yadavagiri, Mysore 570 020 |
| 5 | Editor's Name | Swami Vireshananda |
| | Nationality | Indian |
| | Address | Sri Ramakrishna Ashrama Yadavagiri Mysore 570 020 |
| 6. | Name & Addresses of the individuals who own the newspaper and partners or share-holders holding more than 1% of the capital | President, Sri Ramakrishna Ashrama, Yadavagiri Mysore 570 020 |

**I, Swami Nityasthananda, hereby declare that the particulars given above are true to the best of my knowledge and belief.**

*Sd.*
*Swami Nityasthananda*
Signature of the Publisher

01.03.2008